ಒಬ್ಬೊಬ್ಬರೇ ಇತ್ತ ದಯಮಾಡಿಸತೊಡಗಿದರು. ಸಹೋದ್ಯೋಗಿ ವಸಂತ ಟೀಚರ್‌ನ ಹುಚ್ಚಾಟಗಳಿಗೆ ಒಳಗೊಳಗೆ ನಗುತ್ತಿದ್ದ ಜ್ಯೋತಿ ಮಿಸ್‌ಗೆ ಅಂದು ಅಂದುಕೊಂಡಂತೆಯೇ ಆಯಿತು. ಆ ಶಾಲೆಯ ಬಹುತೇಕ ಪೋಷಕರು ನಗರ ಸ್ವಚ್ಛಗೊಳಿಸುವ ಪೌರಕಾರ್ಮಿಕರೇ ಆಗಿರುವುದರಿಂದ, ಬಂದವರೆಲ್ಲ ಜನ್ಮದತ್ತ ಯೂನಿಫಾರ್ಮ್ ಆದ ಖಾಕಿ ಅಂಗಿ ಖಾಕಿ ಪ್ಯಾಂಟನ್ನೆ ತೊಟ್ಟಿದ್ದರು. ನಗರದ ಆ ಮೂಲೆ ಈ ಮೂಲೆಯ ಕಸದ ಒಂದಂಶವನ್ನು ತಮ್ಮ ಖಾಕಿಗಳಲ್ಲಿ ಲೇಪಿಸಿಕೊಂಡೇ ಬಂದಿದ್ದ ಅವರು ಗಮ್ ಎನ್ನುತ್ತಿದ್ದರು. ಕೆಲವರು ಪ್ಯಾಂಟಿನ ಒಂದು ಕಾಲನ್ನು ಮಡುಚಿದ್ದರೆ ಇನ್ನೊಂದನ್ನು ಹಾಗೇ ಬಿಟ್ಟುಕೊಂಡಿದ್ದರು. ಕೆಲಸದಿಂದ ಸೀದಾ ಬಂದಿದ್ದ ಅವರ ಮುಖದ ತಗ್ಗುಗಳಲ್ಲಿ ದೂಳಿನ ಕಲೆಗಳು ಅಲ್ಲಲ್ಲೆ ನಿಂತಿದ್ದವು. ಕೆಲವರು ಗುಡಿಸುವ ಪೊರಕೆ, ಚರಂಡಿ ಬಾಚುವ ಉದ್ದನೆಯ ಗುದ್ಲಿಯನ್ನು ಹಿಡಿದೇ ಬಂದಿದ್ದರು. ಅವರು ಹೇಗಾದರೂ ಬರಲಿ, ಅಂತೂ ಬಂದರಲ್ಲ ಎಂಬ ಖುಷಿಯಲ್ಲಿ ವಸಂತ ಮೇಡಮ್ ಅವರು ಕೂರಲು ಕುರ್ಚಿಗಳನ್ನು ಹಾಕಿದರೆ, ಅವರ್‍ಯಾರೂ ಕೂರಲೊಲ್ಲರು. ಅದೇನ್ ಮಾಡ್ಕಳಿ ಟೀಚರ್ ಎಂದು ಬಂದಷ್ಟೇ ವೇಗವಾಗಿ ಜಾಗ ಖಾಲಿಮಾಡಿದರು. ಅವರನ್ನು ಕೂರಿಸಿ ಸಭೆ ಮಾಡಲಾಗದಿದ್ದರೂ, ತನ್ನ ಮತ್ತು ಮಕ್ಕಳ ಮಾತಿಗೆ ಬೆಲೆಕೊಟ್ಟು ಬಂದರಲ್ಲ ಎಂಬುದೇ ವಸಂತ ಮೇಡಮ್‌ಗೆ ಸಮಾಧಾನವಾಗಿ ಉಳಿಯಿತು.

ಮಠದೊಳಗಳ ಸರ್ಕಾರಿ ಶಾಲೆಯವರು ಒಮ್ಮೆ ‘ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನ’ವನ್ನು ಏರ್ಪಡಿಸಿ ಅಕ್ಕಪಕ್ಕದ ಶಾಲೆಯ ಮಕ್ಕಳನ್ನೆಲ್ಲ ಆಹ್ವಾನಿಸಿದ್ದರು. ವಸಂತ ಟೀಚರ್ ಕೂಡ ನಮಗೂ ಕರೆ ಬರಬಹುದು, ಕರೆದುಕೊಂಡು ಹೋಗೋಣ, ಮಕ್ಕಳಿಗೊಂದು ಹೊಸತನ ಸಿಕ್ಕಂತಾಗುತ್ತೆ ಎಂದು ಬಯಸಿದ್ದರು. ವಿಪರ್ಯಾಸವೆಂದರೆ ದೂರದ ಶಾಲೆಗಳಿಗೆಲ್ಲ ಆಹ್ವಾನವಿತ್ತ ಮಠದೊಳಗಣ ಶಾಲೆಯವರು ಮಾದಿರ್ ಶಾಲೆಯವರನ್ನ ಖಣಕ್ಕೂ ಕರೆದಿರಲಿಲ್ಲ. ತೀವ್ರ ನಿರಾಶರಾದ ವಸಂತ ಟೀಚರ್ ಕಾಲೋನಿಯವರ ಮನೆಯೊಳಗಿದ್ದ ಕಸುಬುಗಳಿಗೆ ಸಂಬಂಧಿಸಿದ ಪಾರಂಪರಿಕ ವಸ್ತುಗಳನ್ನು ಸಂಗ್ರಹಿಸಿ ‘ದೇಸಿ ವಸ್ತುಗಳ ಪ್ರದರ್ಶನ’ ಎಂದು ಕರೆದು ಎಲ್ಲರನ್ನೂ ಆಹ್ವಾನಿಸಿದ್ದರು.



ಕೆಲವರಷ್ಟೆ ಬಂದರು. ಹಲವರು ದೂರವೇ ಉಳಿದರು. ಬಂದವರು ಇವರು ಕಾಳಜಿ ವಹಿಸಿ ತಯಾರಿಸಿದ್ದ ಒಬ್ಬಟ್ಟಿನ ಊಟ ತಿನ್ನದೆ ಹೋಗಿದ್ದರು. ಕಾರಣ ಹುಡುಕಿದಾಗ, ಇಲ್ಲಿನ ಕಾಲೋನಿಯವರೇ ತಯಾರಿಸಿದ್ದ ಅಡುಗೆಯನ್ನು ನಾವು ತಿನ್ನುವುದಾ? ಎಂದು ಶಿಷ್ಟಾಚಾರದ ಪ್ರಶ್ನೆ ಎತ್ತಿಕೊಂಡು ಉಣ್ಣದೆ ಹೋದರೆಂದು ತಿಳಿದು ಬಂತು. ಶಿಕ್ಷಕರ ಸಣ್ಣತನಕ್ಕೆ ನಕ್ಕ ವಸಂತ ಟೀಚರ್ ಇನ್ನು ಯಾರೇ ಕರೆದರೂ ತಾನೂ ಹೋಗಬಾರದೆಂಬ ಸಂಕಲ್ಪಕ್ಕೆ ಬಂದರು.

ಒಂದು ಗಣರಾಜ್ಯೋತ್ಸವದ ದಿನ. ಈ ದಿನವನ್ನು ವಿಶೇಷವಾಗಿ ಆಚರಿಸೋಣವೆಂದು ಟೀಚರ್ ಮನೆಯಿಂದಲೇ ಸ್ಪೀಕರ್, ಡಕ್ಕು ಇತ್ಯಾದಿ ತಂದು ಬ್ಲೂಟೂತ್ ಕನೆಕ್ಟ್ ಮಾಡಿ ಕೆಲ ಹಾಡುಗಳನ್ನು ಹಾಕಿ ಬಿಟ್ಟಿದ್ದರು. ಹಾಡು ಮ್ಯೂಸಿಕ್ ಕೇಳಿದ್ದೇ ತಡ ರಂಗೇರಿದ ಮಕ್ಕಳು ವೇದಿಕೆಯ ಮುಂಭಾಗಕ್ಕೆ ಬಂದು ಕುಣಿಯತೊಡಗಿದರು. ತರಬೇತಿ, ಮಾಸ್ಟರ್ ಏನೂ ಇರದ ಮಕ್ಕಳು ಕೈ ಕಾಲು ಆಡಿಸುತ್ತ ಸ್ಟೆಪ್ಸ್ ಹಾಕುತ್ತಿದ್ದರೆ ಮೂಲ ನೃತ್ಯದ ದೃಶ್ಯವೇ ನಾಚುವಂತೆ